ಲಿಬ್ರೆ ಆಫೀಸ್ **ರೈಟರ್** ಗಾಗಿ ಸೂಚನಾಪತ್ರ

**ಸ್ಪೋಕನ್ ಟ್ಯುಟೋರಿಯಲ್ ಟೀಮ್**

**ಐ. ಐ. ಟಿ. ಬಾಂಬೆ**

## 1 ಆನ್ಲೈನ್ / ಆಫ್ಲೈನ್ ವಿಷಯಗಳು.

1. ಸ್ಪೋಕನ್ ಟ್ಯುಟೋರಿಯಲ್ ಗಳ ಆನ್ಲೈನ್ ನಲ್ಲಿನ ವಿಷಯಗಳನ್ನು ಈ ಕೆಳಗಿನ ಲಿಂಕ್ ನಲ್ಲಿ ಪಡೆಯಬಹುದು. http://spoken-tutorial.org/tutorial-search/
2. ನೀವು ಆಫ್ಲೈನ್ ಕಲಿಕೆಗಾಗಿ ಈ ಸ್ಪೋಕನ್ ಟ್ಯುಟೋರಿಯಲ್ ಗಳನ್ನು ಈ ಕೆಳಗಿನ ಲಿಂಕ್ ನಲ್ಲಿ ಪಡೆಯಬಹುದು. http://spoken-tutorial.org/cdcontet/
3. ಈ ಲಿಂಕ್ ನಿಂದ ನೀವು ಯಾವ ಭಾಷೆಯಲ್ಲಿ ಕಲಿಯಲಿಚ್ಛಿಸುವಿರೋ ಆ ಭಾಷೆಯ FOSS ವಿಭಾಗಗಳನ್ನು ಡೌನ್ಲೋಡ್ ಮಾಡಿ.
4. ಸ್ಪೋಕನ್ ಟ್ಯುಟೋರಿಯಲ್ ನ ವಿಷಯಗಳು ನಿಮ್ಮ ಯಂತ್ರದಲ್ಲಿ zip ಫೈಲ್ ನ ರೂಪದಲ್ಲಿ ಡೌನ್ಲೋಡ್ ಆಗುತ್ತದೆ.
5. Zip ಫೈಲ್ ನಲ್ಲಿರುವ ವಿಷಯಗಳನ್ನು ಎಕ್ಸ್ಟ್ರಾಕ್ಟ್ ಮಾಡಿ ಅವುಗಳನ್ನು ಉಪಯೋಗಿಸಿ.

## 2 ಅಭ್ಯಾಸಕ್ಕಾಗಿರುವ ಪ್ರಕ್ರಿಯೆಗಳು.

1. ನಿಮಗೆಲ್ಲರಿಗೂ ಸ್ಪೋಕನ್ ಟ್ಯುಟೋರಿಯಲ್ ಗಳ ಸೆಟ್ ಅನ್ನು ಹಾಗೂ ಫೈಲ್ ಗಳನ್ನು ನೀಡಲಾಗಿದೆ.
2. ನೀವು ಸಾಮಾನ್ಯವಾಗಿ ಒಂದು ಬಾರಿ ಒಂದು ಟ್ಯುಟೋರಿಯಲ್ ಅನ್ನು ಮಾಡುತ್ತೀರಿ.
3. ನೀವು ಸ್ಪೋಕನ್ ಟ್ಯುಟೋರಿಯಲ್ ಅನ್ನು ಕೇಳಬಹುದು ಹಾಗೂ ಅದರಲ್ಲಿ ಹೇಳಿರುವ ಎಲ್ಲಾ ಕಮಾಂಡ್ ಗಳನ್ನು ಪುನಃ ಚಲಾಯಿಸಬಹುದು.
4. ಹೀಗೆ ಮೇಲೆ ಹೇಳಿದ್ದನ್ನು ಮಾಡುವಾಗ ಕಷ್ಟಗಳು ಎದುರು ಬಂದರೆ, ಒಮ್ಮೆ ಆ ಟ್ಯುಟೋರಿಯಲ್ ಅನ್ನು ಸಂಪೂರ್ಣವಾಗಿ ಕೇಳಿಸಿಕೊಂಡು ಅನಂತರ ಎರಡನೇ ಬಾರಿ ಕೇಳುವಾಗ ಅವುಗಳ ಅಭ್ಯಾಸವನ್ನು ಮಾಡಬಹುದು.

## 3 ಲಿಬ್ರೆ ಆಫೀಸ್ - ರೈಟರ್

1. "Select FOSS" ಎಂಬಲ್ಲಿ ಕ್ಲಿಕ್ ಮಾಡಿ ಅಥವಾ, "All FOSS Categories" ಎಂಬ ಡ್ರಾಪ್ಡೌನ್ ಮೆನ್ಯುವನ್ನು ಕ್ಲಿಕ್ ಮಾಡಿ ಅಲ್ಲಿ "LibreOffice-Writer" ಅನ್ನು ಆಯ್ಕೆಮಾಡಿ.
2. ನಂತರ, "Select Language" ಎಂಬಲ್ಲಿ ಕ್ಲಿಕ್ ಮಾಡಿ ಅಥವಾ, "All Languages" ಎಂಬ ಡ್ರಾಪ್ಡೌನ್ ಮೆನ್ಯುವನ್ನು ಕ್ಲಿಕ್ ಮಾಡಿ ನೀವಿಚ್ಛಿಸುವ ಭಾಷೆಯನ್ನು (English, Hindi, Marathi….) ಆಯ್ಕೆಮಾಡಿ.
3. "Submit" ಬಟನ್ ನ ಮೇಲೆ ಕ್ಲಿಕ್ ಮಾಡಿ.
4. ನೀವು ನಿಮ್ಮ ಆಯ್ಕೆಗೆ ಅನುಸಾರವಾಗಿ ಟ್ಯುಟೋರಿಯಲ್ ಗಲ ಸೂಚಿಯನ್ನು ಕಾಣುವಿರಿ.
5. ಕಾಣುತ್ತಿರುವ ಟ್ಯುಟೋರಿಯಲ್ ಗಳಲ್ಲಿ ಮೊದಲನೇ ಟ್ಯುಟೋರಿಯಲ್ ನಿಂದ ಆರಂಭಿಸಿ.

## 4 ಮೊದಲ ಟ್ಯುಟೋರಿಯಲ್ - Introduction (ಪರಿಚಯ)

1. ದಯವಿಟ್ಟು Introduction ಎಂಬುದನ್ನು ಹುಡುಕಿ ಹಾಗೂ ಅದರ ಮೇಲೆ ಕ್ಲಿಕ್ ಮಾಡಿ.
2. ಟ್ಯುಟೋರಿಯಲ್ ಅನ್ನು ಪ್ಲೇ ಮಾಡಲು ಪ್ಲೇಯರ್ ನಲ್ಲಿ play ಬಟನ್ ಅನ್ನು ಕ್ಲಿಕ್ ಮಾಡಿ.
3. ಆ ಟ್ಯುಟೋರಿಯಲ್ ಗೆ ಪೂರ್ವಸಿದ್ಧತೆಗೆ ಬೇಕಾದ ಅಂಶಗಳು ಪ್ಲೇಯರ್ ನ ಕೆಳಭಾಗದಲ್ಲಿ ಕಾಣುತ್ತವೆ.

(ಆನ್ಲೈನ್ ವಿಷಯಗಳಲ್ಲಿ ಮಾತ್ರ)

4. Outline, Assignments, Cod Files ಹಾಗೂ Slides ಗಳು ಪ್ಲೇಯರ್ ನ ಕೆಳಭಾಗದಲ್ಲಿ ಕಾಣುತ್ತವೆ.
5. ಜೊತೆ ಜೊತೆಗೇ ಅಭ್ಯಾಸವನ್ನೂ ಮಾಡಲು ಸಾಧ್ಯವಾಗುವಂತೆ ಪ್ಲೇಯರ್ ನ ಆಕೃತಿಯನ್ನು ಇರಿಸಿ.

**4.1 ಲಿನಕ್ಸ್ ಆಪರೇಟಿಂಗ್ ಸಿಸ್ಟಮ್ ನಲ್ಲಿ ಅಭ್ಯಾಸಕ್ಕಾಗಿ ಸೂಚನೆಗಳು.**

(ಅ) ಟ್ಯುಟೋರಿಯಲ್ ಗಳನ್ನು ಲಿನಕ್ಸ್ ಆಪರೇಟಿಂಗ್ ಸಿಸ್ಟಮ್ ನಲ್ಲಿ ವಿವರಿಸಲಾಗಿದೆ.

(ಆ) ಹಾಗಾಗಿ ಲಿನಕ್ಸ್ ಬಳಕೆದಾರರಿಗೆ ಇದನ್ನು ಅನುಸರಿಸುವುದು ಬಹಳ ಸುಲಭವಾಗುತ್ತದೆ.

**4.2 ಲಿನಕ್ಸ್ ಆಪರೇಟಿಂಗ್ ಸಿಸ್ಟಮ್ ನಲ್ಲಿ ಅಭ್ಯಾಸಕ್ಕಾಗಿ ಸೂಚನೆಗಳು.**

(ಅ) 2:05 ನೇ ನಿಮಿಷದಿಂದ 2:16 ನೇ ನಿಮಿಷದವರೆಗೆ ಉಬಂಟು ಲಿನಕ್ಸ್ ನಲ್ಲಿ ಲಿಬ್ರೆ ಆಫೀಸ್ ಸೂಟ್ ಅನ್ನು ಹೇಗೆ ಒಪನ್ ಮಾಡಿವುದೆಂದು ತಿಳಿಸಲಾಗಿದೆ.

(ಆ) ವಿಂಡೋಸ್ ನಲ್ಲಿ ನೀವು ಇದಕ್ಕಾಗಿ ಕ್ರಮವಾಗಿ Start>>All Programs>>LibreOffice Suite ನ ಮೇಲೆ ಕ್ಲಿಕ್ ಮಾಡಿ.

**4.3 ಅಭ್ಯಾಸಕ್ಕಾಗಿ ಸೂಚನೆಗಳು.**

(ಅ) ಡೆಸ್ಕ್ಟಾಪ್ ನ ಮೇಲೆ ಒಂದು ಫೋಲ್ಡರ್ ಅನ್ನು ರಚಿಸಿ ಅದಕ್ಕೆ 'ಹೆಸರು-ರೋಲ್ ನಂಬರ್-ಘಟಕ' ಈ ಪ್ರಕಾರದಲ್ಲಿ ಹೆಸರನ್ನಿಡಿ. (ಉದಾ. vin-04-Writer).

(ಆ) ಫೈಲ್ ಅನ್ನು ಮುಂದಿನ ಬಾರಿ ಗುರುತಿಸಲು ಸಹಕಾರಿಯಾಗುವಂತೆ ಸೇವ್ ಮಾಡುವಾಗ ಇದಕ್ಕೆ ವಿಶಿಷ್ಟ ಹೆಸರನ್ನಿಡಿ. (ಉದಾ. Practice-1-vin).

(ಇ) ನಿಮ್ಮ ಎಲ್ಲಾ ಕೆಲಸಗಳನ್ನು ನಿಮ್ಮ ಫೋಲ್ಡರ್ ನಲ್ಲಿ ಸೇವ್ ಮಾಡಲು ಮರೆಯದಿರಿ.

(ಈ) ಇದರಿಂದ ನಿಮ್ಮ ಫೈಲ್ ಬೇರೆ ಫೈಲ್ ಗಳಿಗೆ ಓವರ್ ರೈಟ್ ಆಗುವುದಿಲ್ಲ.

(ಈ) ಕೆಲಸದ ಕೊನೆಯಲ್ಲಿ ಸೇವ್ ಮಾಡುವ ಬದಲಿಗೆ ಅದನ್ನು ಆಗಾಗ ಸೇವ್ ಮಾಡುವುದು ಉತ್ತಮ. ಹಾಗಾಗಿ ಕೆಲಸದ ಮಧ್ಯದಲ್ಲಿ ಆಗಾಗ ಸೇವ್ ಮಾಡಲು ಮರೆಯದಿರಿ.

**4.4 ನಿಯತಕಾರ್ಯಕ್ಕಾಗಿ ಸಾಮಾನ್ಯ ಸೂಚನೆಗಳು.**

(ಅ) ಕೊಟ್ಟಿರುವ ಎಲ್ಲಾ ನಿಯತಕಾರ್ಯಗಳನ್ನು ಸೂಚನೆಗೆ ಅನುಸಾರವಾಗಿ ಮಾಡಿ.

(ಆ) ನಿಮ್ಮ ಎಲ್ಲಾ ನಿಯತಕಾರ್ಯಗಳನ್ನು ಮುಖ್ಯ ಫೋಲ್ಡರ್ ನಲ್ಲಿ ಸೇವ್ ಮಾಡಿ.

**4.5 ಕೋಡ್ ಫೈಲ್ ಗಳನ್ನು ಉಪಯೋಗಿಸಲು ಸಾಮಾನ್ಯ ಸೂಚನೆಗಳು.**

1. ಪ್ಲೇಯರ್ ನ ಕೆಳಭಾಗದಲ್ಲಿರುವ "Code Files" ಎಂಬ ಲಿಂಕ್ ಅನ್ನು ಕ್ಲಿಕ್ ಮಾಡಿ ಅದನ್ನು ನಿಮ್ಮ ಫೋಲ್ಡರ್ ನಲ್ಲಿ ಸೇವ್ ಮಾಡಿ.
2. ಡೌನ್ಲೋಡ್ ಮಾಡಿದ zip ಫೈಲ್ ಅನ್ನು ಎಕ್ಸ್ಟ್ರಾಕ್ಟ್ ಮಾಡಿ.
3. ನೀವು ಇಲ್ಲಿ ಕೋಡ್ ಹಾಗೂ ಸೋರ್ಸ್ ಎಂಬ ಫೈಲ್ ಗಳನ್ನು ನೋಡುವಿರಿ.
4. ಇವುಗಳನ್ನು ನಿಮ್ಮ ನಿಗದಿತ ಟ್ಯುಟೋರಿಯಲ್ ಗಳಲ್ಲಿ ಹೇಗೆ ಸೂಚಿಸಿರುವರೋ ಹಾಗೆ ಉಪಯೋಗಿಸಿ.
5. ಟ್ಯುಟೋರಿಯಲ್ ಅನ್ನು ಪ್ಲೇ-ಪಾಸ್-ಪ್ರಾಕ್ಟೀಸ್ ಎಂಬ ವಿಧಾನದಿಂದ ವೀಕ್ಷಿಸಿ.
6. ಒಮ್ಮೆ ಒಂದು ಟ್ಯುಟೋರಿಯಲ್ ಮುಗಿದರೆ ಪ್ಲೇಯರ್ ನ ಬಲಭಾಗದಲ್ಲಿ ಇರುವ ಇದರ ಮುಂದಿನ ಟ್ಯುಟೋರಿಯಲ್ ಗೆ ಹೋಗಿ.
7. ಮೇಲೆ ಹೇಳಿದ ವಿಧಾನದಂತೆಯೇ ಮುಂದಿನ ಎಲ್ಲಾ ಟ್ಯುಟೋರಿಯಲ್ ಗಳನ್ನೂ ಅಭ್ಯಾಸ ಮಾಡಿ.